

## ವಿಶ್ವ ಪರಂಪರೆಯ ಮಂದಿರ

# ಕಿಯೋಮಿಝುದೇರ

**ಕಾಲು ಹಾದಿಯ ಕೊನೆ ತಲುಪುತ್ತಿದ್ದಂತೆಯೇ ಬೆಟ್ಟದ ಮೇಲೆ ಆಕರ್ಷಕ ಗೋಪುರಗಳು ಅನಾವರಣಗೊಂಡು ಅಚ್ಚರಿ ಮೂಡಿಸಿದವು! ಸಾವಿರ ದೇಗುಲಗಳ ನಗರ ಕ್ಯೋಟೋದಲ್ಲಿರುವ ಈ ಕಿಯೋಮಿಝು–ದೇರ ೧೯೯೪ರಲ್ಲಿ ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರ್ಪಡೆಯಾಗಿದೆ.**

■ ಚಿತ್ರ– ಲೇಖನ: **ಮಂಜುನಾಥ. ಡಿ.ಎಸ್**



ಜಪಾನ್ ಪ್ರವಾಸದ ಕಡೆಯ ದಿನ ಕ್ಯೋಟೋದ ಸನ್ನೆನ್‌ಝಕ ಹೆಸರಿನ ಕಿರು ಅಂಗಡಿ ಬೀದಿಯಲ್ಲಿ ಸ್ಮರಣಿಕೆಗಳನ್ನು ಕೊಳ್ಳಲು ಪ್ರವಾಸಿಗರಿಗೆ ಅವಕಾಶ ಕಲ್ಪಿಸಿದ್ದರು. ತಿರುವುಗಳ ಹಾಗೂ ಕಡಿದಾದ ಹಾದಿಯ ಎರಡೂ ಬದಿಗಳಲ್ಲಿ ಅಂಗಡಿಗಳು ಒಟ್ಟೊಟ್ಟಿಗೆ ಇದ್ದವು. ಇವುಗಳಲ್ಲಿ ಮಾರಾಟಕ್ಕೆ ಇಟ್ಟಿದ್ದ ನಾನಾ ಬಗೆಯ ವಿಶೇಷ ನೆನಪಿನ ಕಾಣಿಕೆಗಳು ಹಾಗೂ ಖಾದ್ಯ ಪದಾರ್ಥಗಳತ್ತ ಕಣ್ಣು ಹಾಯಿಸುತ್ತಾ ಸಾಗುತ್ತಿದ್ದೆ.

ಕಾಲು ಹಾದಿಯ ಕೊನೆ ತಲುಪುತ್ತಿದ್ದಂತೆಯೇ ಬೆಟ್ಟದ ಮೇಲೆ ಆಕರ್ಷಕ ಗೋಪುರಗಳು ಅನಾವರಣಗೊಂಡು ಅಚ್ಚರಿ ಮೂಡಿಸಿದವು! ಸುಪ್ರಸಿದ್ಧ ಕಿಯೋಮಿಝು–ದೇರ ದೇಗುಲ ಸಮುಚ್ಚಯದ ಈ ದರ್ಶನ ಅನಿರೀಕ್ಷಿತವಾಗಿತ್ತು. ಇದ್ದ ಅಲ್ಪ ಸಮಯದಲ್ಲಿಯೇ ಈ ಅಗಾಧ ಸಮುಚ್ಚಯದ ಕೆಲವು ಮುಖ್ಯ ಭಾಗಗಳನ್ನು ಮಾತ್ರ ನೋಡಲು ಸಾಧ್ಯವಾಯಿತು; ಅಷ್ಟರಲ್ಲೇ ತೃಪ್ತಿ ಪಡಬೇಕಾಯಿತು.

ಸಾಕನೋಯು ನೊ ತಮುರಮಾರೊ ಕ್ರಿ.ಶ.778ರಲ್ಲಿ ಈ ಬುದ್ಧ ಮಂದಿರವನ್ನು ಹಿಗಾಶಿಯಾಮಾ ಪರ್ವತ ಶ್ರೇಣಿಯ ಶಿಖರವೊಂದರ ಮೇಲೆ ಸ್ಥಾಪಿಸಿದರು. ತೋಕುಗಾವ ಇಯೆಮಿತ್ಸು ಅವರ ಆಣತಿಯ ಮೇರೆಗೆ 1633ರಲ್ಲಿ ಈಗಿನ ಕಟ್ಟಡ ನಿರ್ಮಾಣಗೊಂಡಿತು. ಸನಿಹದ ಬೆಟ್ಟಗಳಿಂದ ಹರಿದು ಬಂದ ನೀರು ಆಲಯದ ಆವರಣದಲ್ಲಿ ಜಲಧಾರೆಗಳಾಗುತ್ತವೆ. ಹಾಗಾಗಿ ದೇಗುಲಕ್ಕೆ ಕಿಯೋಮಿಝು–ದೇರ (ಶುಭ್ರ ಜಲ) ಎಂಬ ಹೆಸರು ಬಂದಿದೆ.

ಆರಂಭದಲ್ಲಿ ಹೊಸ್ಸೊ ಪಂಥಕ್ಕೆ ಸೇರಿದ್ದ ಈ ಆಲಯ 1965ರಿಂದ ಕಿಟಹೊಸ್ಸೊ ಪಂಥದ ಉಸ್ತುವಾರಿಯಲ್ಲಿದೆ. ಸುಮಾರು 1.3 ಲಕ್ಷ ಚದರ ಮೀಟರ್ ವಿಸ್ತೀರ್ಣದ ಈ ಸಮುಚ್ಚಯದಲ್ಲಿ ಇಪ್ಪತ್ತಕ್ಕೂ ಹೆಚ್ಚು ಕಟ್ಟಡಗಳಿವೆ. ಇವುಗಳಲ್ಲಿ ಕೆಲವಕ್ಕೆ ಸಾರ್ವಜನಿಕರಿಗೆ ಪ್ರವೇಶ ಇರುವುದಿಲ್ಲ.

ಸೈಪ್ರಸ್ ಮರದ ತೊಗಟೆಗಳ ಛಾವಣಿಯ ಎರಡಂತಸ್ತಿನ ಕಟ್ಟಡ ನಿಯೊ–ಮೊನ್ 1478ರಲ್ಲಿ ನಿರ್ಮಾಣಗೊಂಡಿತು. ದೇಗುಲವನ್ನು ‘ದುಷ್ಟ ಶಕ್ತಿಗಳಿಂದ ರಕ್ಷಿಸಲೋಸುಗ’ ಪಾವಟಿಕೆಗಳ ಎರಡೂ ಬದಿಗಳಲ್ಲಿ ಕೊಮ–ಇನು ಸಿಂಹಗಳನ್ನು